# ಸಂಸ್ಕೃತಿಯ ನೆಲೆಯಲ್ಲಿ ಭಾಷೆ, ಸಾಹಿತ್ಯದ ಪಾತ್ರ

**ಡಾ.ಡಿ.ಕೆ. ರಾಜೇಂದ್ರ**

ನಮ್ಮ ಸಮಾಜ, ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಭಾಷೆ ಹಾಗೂ ಸಾಹಿತ್ಯ ಇವು ನಮ್ಮ ಬದುಕನ್ನು ವಿವಿಧ ರೀತಿಯಲ್ಲಿ ಪ್ರಭಾವಿಸುತ್ತವೆ. ಭಾಷೆಯ ಕಲಿಕೆ, ಅಧ್ಯಯನ ಹಾಗೂ ಸಾಹಿತ್ಯರಚನೆ ಪ್ರೌಢವಾದಷ್ಟೂ ನಮ್ಮ ಜನಜೀವನ ಸಮೃದ್ಧಗೊಳ್ಳುವುದು. ಈ ವಿಷಯವನ್ನು ಕುರಿತು ಇಲ್ಲಿ ಬರೆದಿರುವ ಲೇಖಕರು ಕನ್ನಡ ನಿವೃತ್ತ ಪ್ರಾಧ್ಯಾಪಕರು ಹಾಗೂ ಹಿರಿಯ ವಿದ್ವಾಂಸರು. ಅನೇಕ ಮಹತ್ವಪೂರ್ಣ ಗ್ರಂಥಗಳನ್ನು ರಚಿಸಿರುವ ಅವರು 'ವಿವೇಕಪ್ರಭ'ದಲ್ಲಿ ಹಲವು ಲೇಖನಗಳನ್ನು ಬರೆದಿದ್ದಾರೆ.

**ಭಾ**ಷೆ-ಸಾಹಿತ್ಯ-ಸಂಸ್ಕೃತಿ ಈ ಮೂರೂ ಮಾನವ ಜಗತ್ತಿಗೆ ಬೇಕಾದ ಗಾಳಿ-ನೀರು-ಆಹಾರದಷ್ಟೇ ಆವಶ್ಯಕ, ಅವನ ಭೌತಿಕ ಉಳಿವಿಗೆ ಈ ಮೂರೂ ಮುಖ್ಯವಾದಂತೆಯೇ ಅವನ ಬೌದ್ಧಿಕ-ಮಾನಸಿಕ ಹಾಗೂ ಸಾಂಸ್ಕೃತಿಕವಾದ ಉನ್ನತಿಗೆ ಭಾಷೆ- ಸಾಹಿತ್ಯ -ಸಂಸ್ಕೃತಿಗಳ ಅಗತ್ಯ ಅಪಾರ. ಇವೆಲ್ಲದರ ಒಟ್ಟು ಮೊತ್ತವೇ ಒಂದು ಪರಿಪೂರ್ಣ ವ್ಯಕ್ತಿತ್ವ ಹಾಗೂ ಒಂದು ಪರಿಶುದ್ಧ ಸಮಾಜ. ಮನುಷ್ಯ ಇತರ ಜೀವಜಂತುಗಳಿಗಿಂತ ಭಿನ್ನವೆನಿಸಿರುವುದು ಶ್ರೇಷ್ಠವೆನಿಸಿರುವುದು ಈ ಕಾರಣದಿಂದಲೇ. ಒಬ್ಬ ವ್ಯಕ್ತಿ ಹಾಗೂ ಒಂದು ಸಮಾಜ ಇವುಗಳಲ್ಲಿ ವ್ಯತ್ಯಯ ಕಂಡುಬರುವುದು ಇವುಗಳಲ್ಲಿನ ವ್ಯತ್ಯಯಗಳ ಕಾರಣದಿಂದಲೇ. ಯಾವೊಬ್ಬ ವ್ಯಕ್ತಿ ಈ ಮೂರನ್ನೂ ತಿರಸ್ಕರಿಸಿ ಅಥವಾ ನಿರ್ಲಕ್ಷಿಸಿ ಬದುಕುತ್ತಾನೋ ಅಥವಾ ಯಾವ ಒಂದು ಸಮಾಜ ಇವುಗಳಿಂದ ವಂಚಿತವಾಗಿ ರೂಪುಗೊಳ್ಳುತ್ತದೋ ಅಂತಹ ವ್ಯಕ್ತಿ ಅಥವಾ ಸಮಾಜ ನಿಜಕ್ಕೂ ದುರ್ಗತಿಯ ಹಾದಿ ಹಿಡಿದಂತೆಯೇ ಲೆಕ್ಕ. 'ಮಾನವ ಜನ್ಮ ದೊಡ್ಡದು ಅದನು ಹಾನಿಮಾಡಿಕೊಳ್ಳಬೇಡಿರೋ ಹುಚ್ಚಪ್ಪಗಳಿರಾ' ಎಂಬ ದಾಸವಾಣಿಗೆ ಕಿವಿಗೊಟ್ಟು, ಅರ್ಥಪೂರ್ಣವಾದ ರೀತಿಯಲ್ಲಿ ನಡೆಯಬೇಕಾದರೆ ಈ ಮೂರು ವಿಷಯಗಳಲ್ಲಿಯೂ ಸಮಭಾವನೆಯನ್ನು ಹೊಂದಿದ್ದು, ಸಮಾನ ಗೌರವದಿಂದ ನಡೆದುಕೊಳ್ಳಬೇಕಾಗುತ್ತದೆ.

ಭಾಷೆ-ಸಾಹಿತ್ಯ-ಸಂಸ್ಕೃತಿ ಈ ಮೂರೂ ಮೇಲ್ನೋಟಕ್ಕೆ ಬೇರೆ ಬೇರೆಯಾಗಿ ತೋರಿದರೂ, ಬೇರೆ ಬೇರೆ ಸ್ವರೂಪವನ್ನು ಹೊಂದಿದ್ದರೂ ಅವು ಅಷ್ಟೇ ಸಂಕೀರ್ಣ. ಒಂದರ ಹೊರತು ಮತ್ತೊಂದನ್ನು ನೋಡುವುದಾಗಲಿ, ಪರಿಭಾವಿಸುವುದಾಗಲಿ ಸಾಧ್ಯವಿಲ್ಲ. ಭಾಷೆಯ ಹೊರತು ಸಾಹಿತ್ಯವಿಲ್ಲ, ಸಾಹಿತ್ಯದ ಹೊರತು ಸಂಸ್ಕೃತಿ ಇಲ್ಲ, ಇವೆರಡರ ಹೊರತು ಸಮಾಜವಿಲ್ಲ. 'ನಾಲಿಗೆ ಕುಲ ಹೇಳಿತು' ಎಂಬ ನಾಣ್ಣುಡಿಯಲ್ಲಿ , 'ಗಾದೆಯ ಒಂದು ತುದಿ ಸಾಹಿತ್ಯ, ಮತ್ತೊಂದು ತುದಿ ಸಂಸ್ಕೃತಿ' ಎಂಬಂತಹ ಹಿರಿಯೋಕ್ತಿಗಳಲ್ಲಿ ಅದು ಸುಸ್ಪಷ್ಟ. ಹಾಗಾಗಿ ವ್ಯಕ್ತಿಯ ಜೀವನದಲ್ಲಿ ಹಾಗೂ ಒಂದು ಸಮಾಜದ ಚೌಕಟ್ಟಿನಲ್ಲಿ ಈ ಮೂರೂ ಮುಖ್ಯ ಪಾತ್ರ ವಹಿಸುತ್ತವೆ.




**ಭಾಷೆ :** ಭಾಷೆಯ ಬಳಕೆ ಎರಡು ಬಗೆಯಾದದ್ದು: ಒಂದು ಬರವಣಿಗೆಯ ಮೂಲಕ, ಮತ್ತೊಂದು ಮಾತಿನ ಮೂಲಕ. ನಮ್ಮ ಮನಸ್ಸಿನ ಭಾವನೆಗಳನ್ನು, ವಿಚಾರಗಳನ್ನು ಅಭಿವ್ಯಕ್ತಿಸುವ ಪ್ರಮುಖ ಸಾಧನ ಭಾಷೆ. ಇತರರೊಂದಿಗೆ ಸಂಪರ್ಕ ಬೆಳೆಸಲು ಅಗತ್ಯವಾದ ಒಂದು ಸಾಧನ. ಭಾಷೆಯ ಅಗತ್ಯ ಹಾಗೂ ಅದರ ಅನಿವಾರ್ಯತೆ ಹೆಚ್ಚು ಮನದಟ್ಟಾಗುವುದು, ಮಾತು ಬಾರದ ಒಬ್ಬ ವ್ಯಕ್ತಿಯನ್ನು ಕಂಡಾಗ ಮಾತ್ರ. ಭಾಷೆ ಮನುಷ್ಯ ಸಂಬಂಧಗಳನ್ನು ಹುಟ್ಟುಹಾಕುವಲ್ಲಿ, ಬೆಳೆಸಿ ಉತ್ತುಂಗಕ್ಕೆ ಏರಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸುವಂತೆಯೇ, ಅದನ್ನು ಪಾತಾಳಕ್ಕೆ ಇಳಿಸುವಲ್ಲಿಯೂ ಅಷ್ಟೇ ಮಹತ್ವದ ಪಾತ್ರವನ್ನು ವಹಿಸಬಲ್ಲದು. ಅದಕ್ಕೇ ಹಿರಿಯರು ಹೇಳುವುದು; ಮಾತನಾಡುವಾಗ ಎಚ್ಚರವಿರಬೇಕು ಎಂದು. ಇಲ್ಲವಾದರೆ 'ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು' ಎಂಬಂತಾಗುತ್ತದೆ. ನಾಲಿಗೆ ಕುಲ

ಹೇಳುತ್ತದೆ ಎಂಬ ಮಾತೂ ಕೂಡ ಭಾಷೆಗಿರುವ ಶಕ್ತಿಯನ್ನು ಹಾಗೂ ಅದರೊಂದಿಗಿನ ಸಂಸ್ಕೃತಿ-ಸಂಸ್ಕಾರದ ಸಂಬಂಧಗಳನ್ನು ಸೂಚಿಸುತ್ತದೆ. 'Language has the power to build societies, but also tear them down' ಭಾಷೆ ಒಂದು ಸಮಾಜವನ್ನು ಶಕ್ತಿಯುತವಾಗಿ ಕಟ್ಟುವ ಶಕ್ತಿಯನ್ನು ಹೊಂದಿದೆ, ಹಾಗೇ ಅದನ್ನು ತುಂಡರಿಸುವ ಶಕ್ತಿಯನ್ನೂ ಹೊಂದಿದೆ. ವ್ಯಕ್ತಿ ಸಂಬಂಧಗಳೂ ಕೂಡ ನಿರ್ಣಯವಾಗುವುದು ಭಾಷೆಯ ಬಳಕೆಯಿಂದಲೇ. ಯಾವುದೇ ಭಾಷೆ ಅದು ಕೇವಲ ಧ್ವನಿಗಳ ಅಥವಾ ಅಕ್ಷರಗಳ ಸರಮಾಲೆ ಅಷ್ಟೇ ಅಲ್ಲ ; ಅದರಲ್ಲಿ ಆ ಮಾತನ್ನು ಆಡುವ ವ್ಯಕ್ತಿಯ ವ್ಯಕ್ತಿತ್ವವೇ ಅನಾವರಣಗೊಂಡಿರುತ್ತದೆ- ಅವ ನೇನೆಂಬುದನ್ನು ಅವನೆಂತಹವನು ಎಂಬುದನ್ನು ಅಷ್ಟೇ ಅಲ್ಲ ; ಅವನ ಹಿನ್ನೆಲೆ ಎಂತಹುದೆಂಬುದನ್ನು ಅದು ಪ್ರತಿನಿಧಿಸುತ್ತದೆ, ಪ್ರತಿಬಿಂಬಿಸುತ್ತದೆ. ಏಕೆಂದರೆ ಅದರಲ್ಲಿ ನಮ್ಮ ಚಿಂತನೆಗಳು, ಆಲೋಚನೆಗಳು ಹಾಗೂ ಭಾವನೆಗಳು ತುಂಬಿರುತ್ತವೆ. ಭಾಷೆಯ ಬಳಕೆಯಲ್ಲಿ ಸಂಸ್ಕೃತಿ-ಸಂಸ್ಕಾರಗಳು ಬೆರೆತಿದ್ದಾಗ ಮಾತ್ರ ಅದು ಅಮೃತತ್ವವನ್ನು ಹೊಂದಲು ಸಾಧ್ಯ. ಇಲ್ಲವಾದರೆ ಮಾತೇ ಮುತ್ತು, ಮಾತೇ ಮೃತ್ಯು ಕೂಡ ಆಗಬಲ್ಲದು. ನಾವಾಡುವ ಮಾತು ಅದು ಯಾವುದೇ ಭಾಷೆಯದ್ದಾಗಿರಲಿ ಅದರಲ್ಲಿ ಸಂಸ್ಕೃತಿ ಬೆರೆತಿರುವುದು ಅಗತ್ಯ, ಅಷ್ಟೇ ಅನಿವಾರ್ಯ. ಏಕೆಂದರೆ ಸಂಸ್ಕೃತಿಯ ಹೊರತಾಗಿ ಭಾಷೆ ಇಲ್ಲ , ಇರಬಾರದು. ಹಾಗೆ ನೋಡಿಕೊಳ್ಳುವುದು, ಎಚ್ಚರ ವಹಿಸುವುದು ಅಗತ್ಯ.

ಯಾವುದೇ ಒಂದು ಭಾಷೆಯಾಗಲಿ ಅಥವಾ ಆ ಮೂಲಕ ವ್ಯಕ್ತವಾಗುವ ಮಾತಾಗಲಿ ಮಾನವ ಸಂಬಂಧಗಳನ್ನು ಬೆಳೆಸುವಂತಿರಬೇಕು, ಅದನ್ನು ವೃದ್ಧಿಸುವಂತಿರಬೇಕು. ಅದು ಸಾಧ್ಯವಾಗುವುದು ಅದಕ್ಕೆ ಸಂಸ್ಕಾರದ ನೆಲೆಗಟ್ಟಿದ್ದಾಗ ಮಾತ್ರ. ತುದಿ ನಾಲಿಗೆಯ ಕೃತಕವಾದ ಮಾತು ಅಂತರಂಗವನ್ನು ಎಂದೂ ಪೂರ್ಣವಾಗಿ ಪ್ರತಿನಿಧಿಸಲಾರದು, ಸಂಬಂಧಗಳನ್ನು ಗಾಢವಾಗಿ ಕೂಡಿಸಲಾರದು. ಮಾನವನ ಕ್ಷೇಮಾಭ್ಯುದಯಕ್ಕೆ ಭಾಷೆಯೇ ಮೂಲ ಕಾರಣವಾಗುವಂತಿರಬೇಕು.

**ಸಾಹಿತ್ಯ :** ಸಾಹಿತ್ಯ ಮೂಲಭೂತವಾಗಿ ಒಂದು ಕಲೆ. ಅದರ ನಾನಾ ರೂಪಗಳನ್ನು ಒಳಗೊಂಡು ರೂಪಿತವಾದದ್ದು. ಕಥೆ, ಕವಿತೆ, ನಾಟಕ, ಪ್ರಬಂಧ ಇತ್ಯಾದಿ ಇತ್ಯಾದಿ. ಅದು ಸಮಾಜದ ಪ್ರತಿಬಿಂಬ ಹಾಗೂ ಗತಿಬಿಂಬ ಕೂಡ. ಅದು ಬರವಣಿಗೆಯ ರೂಪದಲ್ಲಿ ಹೊರಹೊಮ್ಮಿರುವಂತೆಯೇ ಮೌಖಿಕವಾಗಿಯೂ ಹೊರಹೊಮ್ಮಿರುವುದನ್ನು ಕಾಣಬಹುದು. ಅನಕ್ಷರಸ್ಥರಿಂದ ಬಂದ ಅಪಾರ ಅಪೂರ್ವ ಜನಪದ ಸಾಹಿತ್ಯ ಇದಕ್ಕೆ ಸಾಕ್ಷಿ. ಸಾಹಿತ್ಯ ಜ್ಞಾನದ, ಮನರಂಜನೆಯ ಹಾಗೂ ಪರಂಪರೆಯನ್ನು ಗರ್ಭೀಕರಿಸಿಕೊಂಡ ಒಂದು ಪ್ರಕಾರವಾಗಿರುವಂತೆಯೇ, ಅಷ್ಟೇ ಪ್ರಮಾಣದಲ್ಲಿ ಸಂಸ್ಕೃತಿಯನ್ನೂ ಪ್ರತಿಬಿಂಬಿಸುವ, ಪ್ರತಿನಿಧಿಸುವ ಪ್ರಕಾರವಾಗಿಯೂ ಅದನ್ನು ಪರಿಗಣಿಸಲಾಗಿದೆ. ಸಂಸ್ಕೃತಿಯ ವಾಹಕವಾಗಿಯೂ ಸಾಹಿತ್ಯ ವಿಜೃಂಭಿಸುತ್ತದೆ. ಈ ನಿಟ್ಟಿನಲ್ಲಿ ಭಾಷೆ ಮತ್ತು ಸಂಸ್ಕೃತಿಗಿರುವ ನಂಟು ಮತ್ತು ಗಂಟು ಎಂತಹುದೆಂಬುದರ ಅರಿವಾಗದಿರದು.

ಯಾವುದು ಒಂದುಗೂಡಿಸುವುದೋ ಅದು ನೈತಿಕತೆ, ಯಾವುದು ಬೇರ್ಪಡಿಸುವುದೋ ಅದು ಅನೈತಿಕತೆ. ಇದು ಸ್ವಾಮಿ ವಿವೇಕಾನಂದರ ವಾಣಿ. ನೈತಿಕತೆಯನ್ನು ವೃದ್ಧಿಗೊಳಿಸುವ ಶಕ್ತಿ, ಭಾಷೆ-ಸಾಹಿತ್ಯ ಎರಡಕ್ಕೂ ಇದೆ. ಆವೊಂದು ಚೌಕಟ್ಟಿನಲ್ಲಿ ವ್ಯಕ್ತಿ ಮತ್ತು ಸಮಾಜ ಎರಡೂ ರೂಪುಗೊಂಡು ಬೆಳೆದುಬಂದಾಗ ಅದರಿಂದ ಅಭಿವ್ಯಕ್ತಿಗೊಳ್ಳುವ ಸಾಹಿತ್ಯ ಅನೈತಿಕತೆಯನ್ನು ತೊಲಗಿಸಿ, ನೈತಿಕತೆಯನ್ನು ಬೆಳೆಸಿ ಒಂದುಗೂಡಿಸುವ ಕೆಲಸವನ್ನು ಮಾಡುತ್ತದೆ. ನಾವಾಡುವ ಮಾತಿನಷ್ಟೇ ಪ್ರಭಾವಶಾಲಿ, ಪರಿಣಾಮಕಾರಿ ಸಾಹಿತ್ಯ ಕೂಡ. 'ಮಾತು ಮನೆ ಕೆಡಿಸಿತು, ತೂತು ಒಲೆ ಕೆಡಿಸಿತು' ಎಂಬ ಮಾತಿನಂತೆಯೇ 'ಲೇಖನಿ ಖಡ್ಗಕ್ಕಿಂತ ಹರಿತ' ಎಂಬ ಮಾತೂ ಕೂಡ ಸಾಹಿತ್ಯದ ಪ್ರಭಾವ, ಪರಿಣಾಮಗಳೇನು ಎಂಬುದಕ್ಕೆ ಸಾಕ್ಷಿಯಾಗುತ್ತದೆ. ಸಾಹಿತ್ಯ ದೊಡ್ಡ ದೊಡ್ಡ ಕ್ರಾಂತಿಗೆ ಕಾರಣವಾದ ನಿದರ್ಶನಗಳಿವೆ. ದೊಡ್ಡ ದೊಡ್ಡ ಪರಿವರ್ತನೆಗೆ ಇಂಬುಕೊಟ್ಟ ನಿದರ್ಶನಗಳೂ ಇವೆ. ಏಕೆಂದರೆ ಸಾಹಿತ್ಯ ಬರೀ ಅಕ್ಷರಗಳ ಮಾಲೆಯಲ್ಲ. ಅದೊಂದು ಘಟನಾವಳಿಗಳ ಜೋಡಣೆ; ಅದರಲ್ಲಿ ಸಾಮಾಜಿಕವಾದ, ರಾಜಕೀಯವಾದ, ಧಾರ್ಮಿಕವಾದ, ಆರ್ಥಿಕವಾದ, ಚಾರಿತ್ರಿಕವಾದ ಹಾಗೂ ಸಾಂಸ್ಕೃತಿಕವಾದ ಎಲ್ಲ ಸಂದರ್ಭ ಸನ್ನಿವೇಶಗಳ ಸರಮಾಲೆಯೇ ಇರುತ್ತದೆ.

ಹಾಗಾಗಿ ಸಾಹಿತ್ಯ ಸಮಾಜ ಸಂಬಂಧಿಯಾದದ್ದು. ಸಮಾಜದ ಎಲ್ಲ ಆಗುಹೋಗುಗಳನ್ನು ಸ್ಥಿತ್ಯಂತರಗಳನ್ನು ಅದು ಗರ್ಭೀಕರಿಸಿಕೊಂಡು ಸೃಷ್ಟಿಯಾಗಿರುತ್ತದೆ. ಅಂತಹ ಕೃತಿಯೊಂದರ ಕರ್ತೃ ಬದ್ಧತೆಯುಳ್ಳ ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿದ್ದರೆ ಆವೊಂದು ಸಾಹಿತ್ಯ ಆ ಕಾಲದ ಎಲ್ಲ ಸಂಗತಿಗಳ ದಾಖಲಾತಿಯಾಗಿ ಅದಕ್ಕೆ ಸಾಕ್ಷಿಯಾಗುತ್ತದೆ. ಅದು ನೈತಿಕತೆಯನ್ನು ಬೆಳೆಸಲೂ ಕಾರಣವಾಗಬಹುದು, ಪ್ರೇರಣೆ ನೀಡಬಹುದು, ಹಾಗೇ ಅನೈತಿಕತೆಯನ್ನು ಪ್ರೇರೇಪಿಸಲೂ ಅದು ನೆರವಾಗಬಹುದು. ಭಾಷೆಗೂ, ಸಾಹಿತ್ಯಕ್ಕೂ ಹಾಗೂ ಸಮಾಜಕ್ಕೂ ಇರುವ ಸಂಬಂಧ ಈ ತೆರನಾದದ್ದು. ಫ್ರೆಂಚ್ ಕ್ರಾಂತಿಗೆ ಕಾರಣವಾದ ಆ ಸಂದರ್ಭದಲ್ಲಿನ ಸಾಹಿತ್ಯ ಸೃಷ್ಟಿ ಇದಕ್ಕೊಂದು ಉತ್ತಮ ಉದಾಹರಣೆ. ಸಾಹಿತ್ಯ ಏನೆಲ್ಲವನ್ನು ಮಾಡಲು ಸಾಧ್ಯ ಎಂಬುದಕ್ಕೆ ಇದೊಂದು ಸ್ಪಷ್ಟ ನಿದರ್ಶನ.

**ಸಂಸ್ಕೃತಿ :** ಭಾಷೆ ಮತ್ತು ಸಾಹಿತ್ಯ ಆಯಾಕಾಲದ ಸಂಸ್ಕೃತಿಯನ್ನು ಹೊತ್ತು ಸಾಗುವ ವಾಹಕ. ಅಂತಹ ಸಂಸ್ಕೃತಿ ಮತ್ತು ಅದನ್ನು ಹೊತ್ತು ಸಾಗುವ ಸಾಹಿತ್ಯ ಒಂದೇ ತೆರನಾಗಿರುತ್ತದೆ ಎಂದೇನೂ ಅಲ್ಲ. ಕಾಲ ಬದಲಾದಂತೆ, ಮನಸ್ಥಿತಿ ಬದಲಾದಂತೆ

ಅದರ ಸ್ವರೂಪವೂ ಬದಲಾಗುತ್ತಾ ಸಾಗುತ್ತದೆ. ಇದಕ್ಕೆ ಸಾಹಿತ್ಯ ಚರಿತ್ರೆಯಲ್ಲಿ ಸಾಕಷ್ಟು ನಿದರ್ಶನಗಳಿವೆ. ಅದಕ್ಕನುಗುಣವಾಗಿ ಸಾಹಿತ್ಯದ ವಸ್ತು, ಭಾಷೆ, ಶೈಲಿ ಎಲ್ಲವೂ ಬದಲಾಗುತ್ತದೆ. ಸಂಸ್ಕೃತಿ ಸಂಪನ್ನವಾದ ಕಾಲದ ಸಾಹಿತ್ಯ ಒಂದು ಬಗೆಯದ್ದಾದರೆ, ಅದಕ್ಕೆ ವಿರುದ್ಧ ಸ್ಥಿತಿಯ ಕಾಲದ ಸಾಹಿತ್ಯದ ಸ್ವರೂಪ ಮತ್ತೊಂದು ಬಗೆಯದ್ದಾಗಿರುತ್ತದೆ. ಭಾರತೀಯ ಸಾಹಿತ್ಯಿಕ ಪರಂಪರೆಯನ್ನು ಕುರಿತು ಹೇಳುವಾಗ ಸ್ವಾಮಿ ವಿವೇಕಾನಂದರು ಹೇಳುವ ಈ ಮಾತು ಗಮನಾರ್ಹ: ''ಜಗತ್ತಿನ ಎಲ್ಲ ವಿಜ್ಞಾನಗಳ ಮೂಲ ಭಾರತವೇ ಆಗಿತ್ತು. ಮಾನವಾಭ್ಯುದಯವನ್ನು ಅನುಗ್ರಹಿಸುವ ಎಲ್ಲ ಮಹತ್ತರ ವಿಚಾರಗಳೂ ಸಂಸ್ಕೃತ ಭಾಷೆಯಲ್ಲಿಯೇ ದಾಖಲಾಗಿದೆ.'' ಮಾನವ ಕುಲಕ್ಕೆ ಬೇಕಾದ ಅಗತ್ಯ ವಿಷಯಗಳನ್ನೊಳಗೊಂಡ ಎಲ್ಲ ಗ್ರಂಥಗಳೂ ಸಂಸ್ಕೃತ ಭಾಷೆಯಲ್ಲಿ ಭಾರತದಲ್ಲಿಯೇ ಸೃಷ್ಟಿಗೊಂಡವುಗಳು. ಅವುಗಳ ಮಹತ್ವವನ್ನು ಇಡೀ ಜಗತ್ತೇ ಒಪ್ಪಿ ವರ್ಣಿಸಿದೆ. ಇತಿಹಾಸತಜ್ಞ ವಿಲ್ ಡ್ಯೂರಾಂಟ್ ನ ಪ್ರಕಾರ – ಸಂಸ್ಕೃತ ಎಲ್ಲ ಐರೋಪ್ಯ ಭಾಷೆಗಳ ತಾಯಿ. ಭಾರತಮಾತೆಯು ನಮ್ಮ ತತ್ತ್ವಸಿದ್ಧಾಂತಗಳ ತಾಯಿ; ಅವಳೇ ಅರಬ್ಬರ ಮೂಲಕ ಬಂದ ಗಣಿತಶಾಸ್ತ್ರದ ತಾಯಿ, ಬುದ್ಧನ ಮೂಲಕ ಬಂದ ಕ್ರೈಸ್ತಧರ್ಮದ ವಿಚಾರಗಳ ಮಾತೆ; ಗ್ರಾಮ ಸಮುದಾಯಗಳ ಸ್ಥಳೀಯ ಸರ್ಕಾರಗಳು ಮತ್ತು ಪ್ರಜಾಪ್ರಭುತ್ವದ ಜನನಿಯೂ ಹೌದು. ಒಟ್ಟಾರೆ ಭಾರತಮಾತೆಯು ಅನೇಕ ದೃಷ್ಟಿಯಿಂದ ನಮ್ಮೆಲ್ಲರ ತಾಯಿ ಆಗಿದ್ದಾಳೆ. ಹೆಮ್ಮೆ ಪಡಬಹುದಾದ ಈ ಹೇಳಿಕೆ ಭಾರತೀಯ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಿರುವ ಶಕ್ತಿಯನ್ನು ಅದರ ಸತ್ವವನ್ನು ಎತ್ತಿ ತೋರುತ್ತದೆ.

ಆದರೆ ಅಂತಹದೇ ಸ್ಥಿತಿ ಎಲ್ಲ ಕಾಲಕ್ಕೂ ಇರುತ್ತದೆ ಎಂದಲ್ಲ– ಇರಬೇಕೆಂಬ ನಿರೀಕ್ಷೆ ತಪ್ಪಲ್ಲ. ಅದಕ್ಕಾಗಿ ಪ್ರಾಮಾಣಿಕ ಪ್ರಯತ್ನ, ಬದ್ಧತೆ ಅಗತ್ಯ. ಸ್ವಾಮಿ ವಿವೇಕಾನಂದರ ಕಳಕಳಿ ಅದೇ ಆಗಿತ್ತು: ''ನಿಮ್ಮೆಲ್ಲರಿಂದಲೂ ನಾನು ಅಪೇಕ್ಷಿಸುವುದು ಸ್ವಪ್ರತಿಷ್ಠೆ, ಅಸೂಯೆ ಮತ್ತು ಗುಂಪುಗಾರಿಕೆಗಳ ವಿಷಯದಲ್ಲಿ ತೀವ್ರ ನಿರ್ಲಕ್ಷ್ಯವನ್ನು ತೋರಿ, ಭೂಮಿತಾಯಿಯಂತೆ ನೀವು ಸಹನಾಶೀಲರಾಗಬೇಕು. ನಿಮಗಿದನ್ನು ಸಾಧಿಸಲು ಸಾಧ್ಯವಾದರೆ, ಜಗತ್ತೇ ನಿಮ್ಮ ಕಾಲಡಿಯಲ್ಲಿರುತ್ತದೆ.''

ಕನ್ನಡ ಸಾಹಿತ್ಯ ಒಂದನ್ನೇ ನಿದರ್ಶನವಾಗಿ ತೆಗೆದುಕೊಂಡು ನೋಡಿದರೂ ಸಾಕು – ಭಾಷೆ, ಸಾಹಿತ್ಯ, ಸಂಸ್ಕೃತಿ ಈ ಮೂರೂ ಆಯಾ ಕಾಲಘಟ್ಟಗಳಲ್ಲಿ ಸ್ಥಿತ್ಯಂತರಗೊಂಡು ಹೇಗೆ ಬೆಳೆಯುತ್ತ ಬಂದಿವೆ ಎಂಬುದನ್ನು ತಿಳಿಯಲು. ಪಂಪಪೂರ್ವ ಯುಗದ ಸಾಹಿತ್ಯ ಒಂದು ತೆರನಾದದ್ದಾದರೆ, ಪಂಪನ ನಂತರದ ಅಥವಾ ಚಂಪೂಯುಗ, ಕುಮಾರವ್ಯಾಸ ಯುಗ, ಬಸವಯುಗ, ನವೋದಯ, ನವ್ಯ, ಬಂಡಾಯ ಇತ್ಯಾದಿ ಕಾಲಘಟ್ಟಗಳಲ್ಲಿ ವಿಭಿನ್ನ ರೀತಿಯ ಸಾಹಿತ್ಯ. ಆಯಾ ಕಾಲದ ಸಂಸ್ಕೃತಿಯೊಂದಿಗೆ ಬೆರೆತು ಅಭಿವೃದ್ಧಿಗೊಂಡು ಬಂದದ್ದು ಆಯಾ ಕಾಲದ ಮನಸ್ಥಿತಿಗೂ, ಸಾಮಾಜಿಕ ಬದಲಾವಣೆಗಳಿಗೂ ಸಾಂಸ್ಕೃತಿಕ ತಿರುವುಗಳಿಗೂ ಸಾಕ್ಷಿಯಾಗುತ್ತದೆ. ದಿವ್ಯತ್ರಯರ ವಿಚಾರಗಳನ್ನೊಳಗೊಂಡಂತೆ ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಬಂದ ಸಂತ ಮಹಾತ್ಮರ ಸಾಹಿತ್ಯರಾಶಿ ಕೂಡ ಇದಕ್ಕೆ ಮತ್ತೊಂದು ಅಪೂರ್ವ ನಿದರ್ಶನ.

ಭಾಷೆ, ಸಾಹಿತ್ಯ, ಸಂಸ್ಕೃತಿ ಇವುಗಳು ನಿಂತ ನೀರಾಗಲು ಸಾಧ್ಯವಿಲ್ಲ ನಿಜ. ಅದು ಸಾಧುವೂ ಅಲ್ಲ. ಬೆಳವಣಿಗೆಯೇ ಅವುಗಳ ಲಕ್ಷಣ. ಆದರೆ ಅವುಗಳನ್ನು ನಿಯಂತ್ರಿಸುವ ಶಕ್ತಿ ಸಂಸ್ಕೃತಿಗಿರಬೇಕು. ಮೂಲಸಂಸ್ಕೃತಿ ನಶಿಸದಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ. ಸಂಸ್ಕೃತಿ ಅಳಿದರೆ ಎಲ್ಲವೂ ಅಳಿದಂತೆ. ನಮ್ಮತನಕ್ಕೆ, ಭಾರತೀಯತೆಗೆ ಸಾಕ್ಷಿಯಾದದ್ದು ಸಂಸ್ಕೃತಿ. ಅದೇ ಜೀವಾಳ. ಭಾಷೆ–ಸಾಹಿತ್ಯ–ಸಂಸ್ಕೃತಿ ಈ ಮೂರೂ ಪರಸ್ಪರ ಪೂರಕ, ಪೋಷಕ. ಮೂಲ ಸಂಸ್ಕೃತಿಯನ್ನು ಕಟ್ಟಿ ನಿಲ್ಲಿಸುವಲ್ಲಿ, ಎತ್ತಿ ಮೆರೆಸುವಲ್ಲಿ ಭಾಷೆ ಮತ್ತು ಸಾಹಿತ್ಯದ ಪಾತ್ರ ಗಣನೀಯವಾದದ್ದು. ಅದನ್ನು ಕಡೆಗಣಿಸುವಂತಿಲ್ಲ. ಇದರೊಂದಿಗೆ ಸ್ವಾಮಿ ವಿವೇಕಾನಂದರ ಕಿವಿಮಾತೊಂದನ್ನು ನೆನಪಿಡುವುದು ಅಗತ್ಯ. ಕೇವಲ ಭಾಷೆ–ಸಾಹಿತ್ಯವಷ್ಟೇ ಅದೆಲ್ಲವನ್ನೂ ಪೂರೈಸಲಾಗದು. ಅದಕ್ಕೆ ಮಾನಸಿಕವಾದ ಸಿದ್ಧತೆ–ಬದ್ಧತೆ ಎರಡೂ ಮುಖ್ಯ. ಆ ಚೇತನ ಎಚ್ಚರಗೊಂಡಾಗಲೇ ಪೂರ್ಣಫಲ ದೊರೆಯಲು ಸಾಧ್ಯ.

ನಾವು ಗ್ರಂಥಗಳನ್ನು ಅಧ್ಯಯನ ಮಾಡುವಾಗ ಅದರಿಂದ ನಮಗೆ ಆಧ್ಯಾತ್ಮಿಕವಾಗಿ ಸಹಾಯವಾಯಿತೆಂದು ಕೆಲವೊಮ್ಮೆ ಭ್ರಮಿಸುತ್ತೇವೆ. ಆದರೆ ಗ್ರಂಥಾಧ್ಯಯನವು ನಮ್ಮ ಮೇಲೆ ಬೀರಿದ ಪರಿಣಾಮವನ್ನು ವಿಶ್ಲೇಷಿಸಿ ನೋಡಿದರೆ ಗೊತ್ತಾಗುತ್ತದೆ– ಅಂತಹ ಅಧ್ಯಯನದಿಂದ ಹೆಚ್ಚೆಂದರೆ ನಮ್ಮ ಬುದ್ಧಿ ಲಾಭ ಪಡೆದುಕೊಂಡಿತೇ ಹೊರತು ಅಂತರಂಗದ ಚೇತನವಲ್ಲ ಎಂದು. ನಮ್ಮಲ್ಲಿ ಪ್ರಾಯಶಃ ಪ್ರತಿಯೊಬ್ಬರೂ ಆಧ್ಯಾತ್ಮಿಕ ವಿಷಯಗಳ ಬಗೆಗೆ ಅತ್ಯದ್ಭುತವಾಗಿ ಮಾತುಗಳನ್ನು ಆಡಬಲ್ಲವರಾದರೂ ಕೂಡ, ನಿಜವಾದ ಆಧ್ಯಾತ್ಮಿಕ ಜೀವನ ಅನುಷ್ಠಾನಕ್ಕೆ ಬಂದಾಗ ನಮ್ಮ ತೀವ್ರ ಅಸಾಮರ್ಥ್ಯವನ್ನು ಕಂಡು ದಂಗಾಗುತ್ತೇವೆ. ಆಧ್ಯಾತ್ಮಿಕ ಬೆಳವಣಿಗೆಯನ್ನು ಶೀಘ್ರಗೊಳಿಸುವ ವಿಚಾರದಲ್ಲಿ ಗ್ರಂಥಗಳಿಗಿರುವ ಅಸಾಮರ್ಥ್ಯವೇ ಇದಕ್ಕೆ ಕಾರಣ. ಚೇತನವನ್ನು ಜಾಗೃತಗೊಳಿಸುವ ಪ್ರೇರಣೆಯು ಇನ್ನೊಂದು ಚೇತನದಿಂದಲೇ ಬರಬೇಕು.

ಯಾವುದೇ ವಿಚಾರ ಗ್ರಂಥಗಳಿಂದ ಓದಿ ತಿಳಿದು, ಅದು ಬುದ್ಧಿಗೆ ತಲುಪಿದರಷ್ಟೇ ಸಾಲದು, ಅದನ್ನು ಅನುಷ್ಠಾನಕ್ಕೆ ತರಬೇಕಾದ ಚೇತನವೂ ನಮ್ಮೊಳಗೇ ಜಾಗೃತಗೊಳ್ಳಬೇಕಾಗುತ್ತದೆ. ಅದಕ್ಕೆ ಸಂಸ್ಕೃತಿಯ, ಸಂಸ್ಕಾರದ ಬೆನ್ನೆಲುಬು ಬೇಕೇಬೇಕು. ಅದಕ್ಕೆ ನಮ್ಮ ನಮ್ಮ ಮನಸ್ಸನ್ನು ಹದಗೊಳಿಸಿಕೊಳ್ಳುವ ಅಗತ್ಯವಿರುತ್ತದೆ. ✽